ದಿನಗಳು ಉರುಳಿದಂತೆ ಸ್ಪೆನ್ಸರನ ಸ್ವಾತಂತ್ರ್ಯದ ಕನಸುಗಳು ಒಂದೊಂದಾಗಿ ಕಳಚಲಾರಂಭಿಸಿದವು. ಅವನಿಗೆ ತಾನೊಬ್ಬ ಹತ್ತು ಕೋಣೆಗಳೊಳಗಿನ ಕೈದಿಯಂತೆ ಭಾಸವಾಗತೊಡಗಿತು. ಅಲ್ಲಿ ಜೈಲರನ ಬದಲು ಇಲ್ಲಿ ಹನ್ನಾಳ ಹದ್ದುಗಣ್ಣು ಅವನನ್ನು ಹಿಂಬಾಲಿಸುತ್ತಿತ್ತು. ವಾಸ್ತವವಾಗಿ ಮನೆಯ ನಿಜವಾದ ಯಜಮಾನಿಯೇ ಹನ್ನಾ ಎಂದು ಅವನಿಗನಿಸುತ್ತಿತ್ತು. ಅವಳ ನಿರ್ಭಾವುಕ ತಣ್ಣನೆಯ ದೃಷ್ಟಿಯಲ್ಲಿ ಅವನಿಗೆ ಯಜಮಾನಿಕೆಯ ಗತ್ತು ಎದ್ದು ಕಾಣಿಸುತ್ತಿತ್ತು. ಇಷ್ಟು ವರ್ಷಗಳಿಂದ ಅವಳು ಪ್ರದರ್ಶಿಸುತ್ತಿದ್ದ ಅತೀ ವಿನಯತೆ, ವಿಶ್ವಾಸನೀಯತೆ ಬರೇ ತೋರಿಕೆ, ಬೂಟಾಟಿಕೆ ಹಾಗೂ ವಾಸ್ತವವಾಗಿ ತಾನೇ ಕೆಲಸದಾಳಿನಂತೆ ಪರಿವರ್ತಿತನಾಗುತ್ತಿರುವುದು ಅವನಿಗೆ ದಿಗಿಲು ಹುಟ್ಟಿಸಲಾರಂಭಿಸಿತು. ಅವಳು ಅವನ ಸುತ್ತ ಬಲೆ ನೇಯುತ್ತಿದ್ದು ತಾನು ಅಸಹಾಯಕನಾಗುತ್ತಿರುವಂತೆ, ಅವಳು ನಗೆ ಬೀರುತ್ತಿರುವಂತೆ ಅವನಿಗೆ ಖಾತ್ರಿಯಾಗತೊಡಗಿತು.

"ಸರ್, ಈ ಹುಡುಗಿ ಮಿಲ್ಲಿಯನ್ನು ಕೆಲಸದಿಂದ ವಜಾ ಮಾಡಬೇಕೆಂದುಕೊಂಡಿದ್ದೇನೆ." ಒಂದು ಮುಂಜಾನೆ ಹನ್ನಾ ಹೇಳಿದಳು.

"ಏನಾಯ್ತು?"

"ಅವಳು ಸರಿಯಿಲ್ಲ."

"ಇರಲಿ. ನಾನೊಮ್ಮೆ ವಿಚಾರಿಸುತ್ತೇನೆ."

"ಆಯ್ತು ಸರ್, ಯೋಚಿಸಿ. ಒಂದು ಅವಳು, ಇಲ್ಲ ನಾನು. ನಿಜಕ್ಕೂ ಇಲ್ಲಿಂದ ಹೋಗಲು ನನಗಿಷ್ಟವಿಲ್ಲ. ಇತ್ತೀಚೆಗೆ ನಾನಿಲ್ಲೇ ನೆಮ್ಮದಿಯಾಗಿದ್ದೆ."

"ನಿನ್ನನ್ನು ಕಳೆದುಕೊಳ್ಳಲು ನನಗೂ ಇಷ್ಟವಿಲ್ಲ ಹನ್ನಾ." ಅಸಹಾಯಕನಾಗಿ ಸ್ಪೆನ್ಸರ್ ಹೇಳಿದ.

"ಥ್ಯಾಂಕ್ಸ್ ಸರ್." ನಾಟಕೀಯವಾಗಿ ಅವಳು ತಲೆ ಬಾಗಿಸಿದಳು. "ನಾನು ಇಷ್ಟು ವರ್ಷಗಳಿಂದ ಇಲ್ಲಿ ಕೆಲಸ ಮಾಡುತ್ತಿದ್ದು ನಿಮ್ಮ ಪ್ರತಿಯೊಂದು ಇಷ್ಟಾರ್ಥಗಳು, ಮೇಡಮರಿಗಿಂತ ನನಗೇ ಚೆನ್ನಾಗಿ ಗೊತ್ತು. ನಿಮ್ಮ ಖುಷಿಗಾಗಿ ನಾನು ಏನನ್ನೂ ಮಾಡಲು ತಯಾರಾಗಿದ್ದೇನೆ."

"ಸರಿ ಹನ್ನಾ. ಮಿಲ್ಲಿ ಬಗ್ಗೆ ನೀನೇ ನಿರ್ಧರಿಸು." ಅವಳಿಗೆ ಅಧಿಕಾರ ಬಿಟ್ಟು ಕೊಡುವವನಂತೆ ಸ್ಪೆನ್ಸರ್ ಹೇಳಿದ.

"ನಾನು ಮುಖ್ಯವಾಗಿ ಮತ್ತೊಂದು ವಿಚಾರಕ್ಕಾಗಿ ನಿಮ್ಮ ಬಳಿ ಬಂದಿದ್ದು. ನಾನೀಗ ಈ ಮನೆಯ ಮೇಲ್ವಿಚಾರಕಿಯಾದ್ದರಿಂದ ನನ್ನ ಪಗಾರ ಏರಿಸುವುದು ಸರಿಯಷ್ಟೇ?"

"ನಿಜ, ನಿಜ." ಸ್ಪೆನ್ಸರ್ ಯೋಚಿಸಲಾರಂಭಿಸಿದ. ''ಈಗ ನಿನ್ನ ಪಗಾರ ಎಷ್ಟು ಹನ್ನಾ?"

"ಮೂವತ್ತೈದು ಶಿಲ್ಲಿಂಗ್ಸ್."

ಸ್ಪೆನ್ಸರ್ ಯೋಚಿಸುವವನಂತೆ ನಟಿಸಿ, "ಸರಿ. ನಾನು ನಿನಗೆ ಐವತ್ತು ಶಿಲ್ಲಿಂಗ್ಸ್ ಕೊಡುತ್ತೇನೆ ಹನ್ನಾ. ಆಗದೇ? ಹದಿನೈದು ಶಿಲ್ಲಿಂಗ್ಸ್ ಭಡ್ತಿ!" ಎಂದ.

ಆಕೆ ಖುಷಿಯಾದಂತೆ ಕಾಣಿಸಲಿಲ್ಲ. "ನಾನು ನೂರು ಶಿಲ್ಲಿಂಗ್ಸ್ ನಿರೀಕ್ಷಿಸಿದ್ದೆ." ಎಂದಳು.

"ಏನೂ! ನೂರು!!" ಸ್ಪೆನ್ಸರ್ ಹೌಹಾರಿದ.

"ನನಗೆ ಇನ್ನೂರು ಕೊಟ್ಟರೂ ಕಡಿಮೆಯೇ ಎನ್ನಬಹುದು ಸರ್. ಫಾಶಿ ಶಿಕ್ಷೆಗಿಂತ ನೂರು ಶಿಲ್ಲಿಂಗ್ಸ್ ಏನೂ ಹೆಚ್ಚಲ್ಲ! ಯೋಚಿಸಿ..."

ಸ್ಪೆನ್ಸರನ ಮುಖ ಕಡು ಕೆಂಪು ಬಣ್ಣಕ್ಕೆ ತಿರುಗಿತು. ಕಣ್ಣುಗಳು ಕಿರಿದಾದವು. ಮುಷ್ಟಿಗಳು ಬಿಗಿದುಕೊಂಡವು. ಆದರೂ ಅಡುಗೆಯವಳು ಕಿಂಚಿತ್ತೂ ವಿಚಲಿತಳಾಗಲಿಲ್ಲ.

"ತಮಾಷೆ ಮಾಡ್ತಾ ಇದೀಯಾ ಹನ್ನಾ?" ಅವನ ದನಿಯಲ್ಲಿ ರೋಷವಿರಲಿಲ್ಲ.